# ಸರ್ವಂ ಸಾಮಾಜಿಕ ಮಾಧ್ಯಮಮಯಂ

ಪ್ರತಿವರ್ಷ ಜೂನ್ 30ರ ದಿನವನ್ನು ಸಾಮಾಜಿಕ ಮಾಧ್ಯಮ ದಿನವನ್ನಾಗಿ ಆಚರಿಸಲಾಗುತ್ತಿದೆ. ಜಾಗತಿಕ ಸಂವಹನದಲ್ಲಿ ಸಾಮಾಜಿಕ ಮಾಧ್ಯಮದ ಪಾತ್ರ, ಮಹತ್ವ ಮತ್ತು ಪರಿಣಾಮಗಳನ್ನು ಮನಗಂಡು ಈ ದಿನವನ್ನು ಆಚರಿಸಲಾಗುತ್ತಿದೆ.

**ಪವನ ಎಚ್.ಎಸ್**

ಯಾವುದೇ ವಿಷಯವನ್ನು ಒಬ್ಬರಿಂದ ಮತ್ತೊಬ್ಬರಿಗೆ ವ್ಯವಸ್ಥಿತವಾಗಿ ತಲುಪಿಸುವುದೇ ಮಾಧ್ಯಮ. ಈ ಹಿಂದೆ ಜನಪದ ಕಥೆಗಳು, ಗಮಕಗಳು, ಹರಿಕಥೆ, ಯಕ್ಷಗಾನ, ಬಯಲು ನಾಟಕ ಮುಂತಾದವುಗಳು ಸಾಮಾಜಿಕ ಮಾಧ್ಯಮಗಳಾಗಿದ್ದವು.

ರಾಜರ ಆಳ್ವಿಕೆ ಕಾಲದಲ್ಲಿ ಪ್ರಾಣಿ, ಪಕ್ಷಿಗಳನ್ನು ಮಾಹಿತಿ ರವಾನೆ ಮಾಡಲು ಬಳಸಲಾಗುತ್ತಿತ್ತು ಎನ್ನುವುದು ಇತಿಹಾಸ. ಸಾರಿಗೆ ಕ್ರಾಂತಿಯ ಬಳಿಕ ಸಂದೇಶ ರವಾನೆ ಹೊಸ ರೂಪ ತಳೆಯಿತು. ಅದರಲ್ಲೂ ಬ್ರಿಟಿಷರು ಭಾರತಕ್ಕೆ ಪದಾರ್ಪಣೆ ಮಾಡಿ ಅಂಚೆ ಎಂಬ ವ್ಯವಸ್ಥಿತ ಜಾಲವನ್ನು ರಚಿಸಿದರು. ಆ ಮೂಲಕ ಪತ್ರಗಳು ಮಾಧ್ಯಮಗಳಾದವು. ಪತ್ರಿಕೆಗಳೂ ಒಂದು ಊರಿನ ಸುದ್ದಿಯನ್ನು ಇನ್ನೊಂದು ಊರಿಗೆ ತಲುಪಿಸತೊಡಗಿದವು. ಈ ನಡುವೆ ಟೆಲಿಗ್ರಾಫ್ ಎನ್ನುವ ಯಂತ್ರ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸಲು ಆರಂಭಿಸಿತ್ತು.

ನಂತರ ಸ್ಥಿರ ದೂರವಾಣಿಗಳು ಪ್ರವರ್ಧಮಾನಕ್ಕೆ ಬಂದವು. ಈ ವೇಳೆಗಾಗಲೇ ಆಕಾಶವಾಣಿ, ದೂರವಾಣಿಗಳು ಮನೆಗಳಲ್ಲಿಯೂ ರಿಂಗಣಿಸುತ್ತಿದ್ದವು. ಪೇಜರ್, ಇ-ಮೇಲ್‌ಗಳೂ ಹಳತಾದವು. ನಂತರ ನಡೆದದ್ದೇ ಚಮತ್ಕಾರ. ಮೊಬೈಲ್ ಎನ್ನುವ ಮಾಯಾವಿ ಆವಿಷ್ಕಾರವಾದ ನಂತರ ಮಾಹಿತಿ ರವಾನೆ ಚಿಟಿಕೆ ಹೊಡೆದಷ್ಟು ಸುಲಭವಾಗಿದೆ.

ಈಗಿನ ಸ್ಮಾರ್ಟ್‌ಫೋನ್ ಯುಗದಲ್ಲಂತೂ ಸಾಮಾಜಿಕ ಮಾಧ್ಯಮಗಳು ಉನ್ನತಿಯ ಶಿಖರದಲ್ಲಿವೆ. ಈ ನಿಟ್ಟಿನಲ್ಲಿ ವಿವಿಧ ಕಂಪನಿಗಳು ತಾ ಮುಂದು ನಾ ಮುಂದು ಎಂಬಂತೆ ಅಗ್ಗದ ಬೆಲೆಗೆ ವಿವಿಧ ಫೀಚರ್ಸ್ ಹೊಂದಿರುವ ಸ್ಮಾರ್ಟ್ ಫೋನ್‌ಗಳನ್ನು ಬಿಡುಗಡೆ ಮಾಡುತ್ತಿವೆ. ಜತೆಗೆ ಅಗ್ಗದ ಬೆಲೆಗೆ ಇಂಟರ್‌ನೆಟ್ ಕೂಡ ಸಿಗುವುದರಿಂದ ಸಾಮಾಜಿಕ ಮಾಧ್ಯಮಕ್ಕೆ ಹೊಸ ಆಯಾಮ ಸಿಕ್ಕಂತಾಗಿದೆ. ಹೊಸ ಅಪ್ಲಿಕೇಷನ್‌ಗಳು ತಣಿಸಲಾರದಷ್ಟು ಕುತೂಹಲ, ಆಸಕ್ತಿಯನ್ನು ಮೂಡಿಸುತ್ತಲೇ ಇದ್ದು, ಟಿ.ವಿ, ರೇಡಿಯೊ, ಪತ್ರಿಕೆಗಳೆಲ್ಲವನ್ನೂ ಸ್ಮಾರ್ಟ್ ಫೋನ್‌ನಲ್ಲೇ ಕಂಡು, ಕೇಳಿ, ಓದುತ್ತಿದ್ದಾರೆ.



**ಯುವಜನರ ನೆಚ್ಚಿನ ಸಾಮಾಜಿಕ ಜಾಲತಾಣ:** ಸಾಮೂಹಿಕವಾಗಿ ಒಂದು ವಿಷಯದ ಕುರಿತು ಚರ್ಚಿಸುವ, ಅದಕ್ಕೆ ಪ್ರತಿಕ್ರಿಯಿಸಲು ಅವಕಾಶವಿರುವ ಪ್ರತಿಯೊಂದು ತಾಣವೂ ಸಾಮಾಜಿಕ ತಾಣವಾಗಿದೆ. ಸಾಮಾಜಿಕ ತಾಣ ಅಂದ ಕೂಡಲೇ ನೆನಪಿಗೆ ಬರುವುದು ಫೇಸ್‌ಬುಕ್, ವಾಟ್ಸ್‌ಆ್ಯಪ್, ಟ್ವಿಟರ್, ಯೂಟ್ಯೂಬ್ ಇತ್ಯಾದಿ. ಅವುಗಳ ಬಳಕೆಯಲ್ಲಿ ಸಿಂಹಪಾಲು ಯುವಪೀಳಿಗೆಯದ್ದೇ ಆಗಿದೆ.

ಫೇಸ್‌ಬುಕ್ ಹಾಗೂ ಟ್ವಿಟರ್ ದಿನದಿಂದ ದಿನಕ್ಕೆ ಹೆಚ್ಚಾಗಿ ಬೆಳೆಯುತ್ತಿರುವ, ಎಲ್ಲರಿಗೂ ಚಿರಪರಿಚಿತವಾಗಿರುವ ಜಾಲತಾಣಗಳು. ನಮ್ಮಲ್ಲಿರುವ ಪ್ರಶ್ನೆ, ವಿಷಯ, ವಿಸ್ಮಯ, ಜನರಿಗೆ ತಿಳಿಯಪಡಿಸಲು, ಮನರಂಜನೆ ಹೊಂದುವ, ಹಂಚುವ, ಜಗತ್ತಿನ ಆಗು-ಹೋಗುಗಳನ್ನು ಮನುಕುಲಕ್ಕೆ ತಲುಪಿಸುವ ಉತ್ತಮ ಮಾಧ್ಯಮಗಳಾಗಿವೆ.

ಕ್ಷಣಮಾತ್ರದಲ್ಲಿ ಸಂದೇಶಗಳನ್ನು ಕಳುಹಿಸುವಲ್ಲಿ ಮೊದಲ ಸ್ಥಾನ ಪಡೆದಿರುವುದು ವಾಟ್ಸ್‌ಆ್ಯಪ್. ಸಂದೇಶಗಳನ್ನು ಬರೆಯಲು, ಕಳುಹಿಸಲು ಸರಳವಾಗಿದ್ದರಿಂದ ಹೆಚ್ಚು ಜನ ಇದರತ್ತ ಒಲವು ಹೊಂದಿದ್ದಾರೆ. ಇದನ್ನು ಬಳಸಲು ಅಗಾಧ ಜ್ಞಾನದ ಅವಶ್ಯಕತೆ ಇಲ್ಲದಿದ್ದರಿಂದ ಫೇಸ್‌ಬುಕ್ ಬಳಸದವರೂ ವಾಟ್ಸ್‌ಆ್ಯಪ್ ಬಳಸುತ್ತಾರೆ. ಟೆಲಿಗ್ರಾಫ್, ಇನ್‌ಸ್ಟಾಗ್ರಾಮ್ ಕೂಡ ಪ್ರಚಲಿತದಲ್ಲಿದ್ದು, ಸಂದೇಶ ಕಳುಹಿಸಲು ಅನೇಕರು ಇವುಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ.

ಹೀಗೆ, ದಿನದಿಂದ ದಿನಕ್ಕೆ ಆವಿಷ್ಕಾರಗಳು ಹೆಚ್ಚಾಗುತ್ತಿದ್ದು, ಪತ್ರ ಬರೆಯುತ್ತಿದ್ದ ಕೈಗಳು ಇಂದು ಟೈಪ್ ಮಾಡುತ್ತಿವೆ.

ಇಷ್ಟೆಲ್ಲ ಬೆಳವಣಿಗೆಗಳ ನಡುವೆ ಸದ್ದಿಲ್ಲದೇ ಸಾಮಾಜಿಕ ಮಾಧ್ಯಮದ ಸಂಪೂರ್ಣ ಲಾಭವನ್ನು ಪಡೆಯುತ್ತಿರುವುದು ವಾಣಿಜ್ಯ ಕ್ಷೇತ್ರ. ಇತ್ತೀಚಿನ ದಿನಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳು, ಬೃಹತ್ ಹೂಡಿಕೆದಾರರು ಮಾತ್ರವಲ್ಲದೇ ಸಣ್ಣ-ಪುಟ್ಟ ಉದ್ದಿಮೆಗಳು ಸಹ ತಮ್ಮ ಮಾರುಕಟ್ಟೆಯನ್ನು ಸಾಮಾಜಿಕ ಮಾಧ್ಯಮಗಳ ಮೂಲಕ ಸೃಷ್ಟಿಸಿಕೊಳ್ಳುತ್ತಿವೆ. ಮಾತ್ರವಲ್ಲ, ಗುಡಿಕೈಗಾರಿಕೆಗಳು, ಗೃಹ ಉತ್ಪನ್ನಗಳಿಗೂ ಈ ಸಾಮಾಜಿಕ ಮಾಧ್ಯಮಗಳು ಗ್ರಾಹಕರಿಗೆ ಮತ್ತು ತಯಾರಕರಿಗೆ ಕೊಂಡಿಯಾಗಿವೆ.

ಯಾವುದೇ ಒಂದು ಸುದ್ದಿಯನ್ನು ಓದಲು ತೆಗೆದರೆ ನೂರಾರು ಬಗ್‌ಗಳು, ಲಿಂಕ್‌ಗಳು ಇಣುಕಿ ನೋಡುತ್ತವೆ. ಜಾಹೀರಾತುಗಳು ಆವರಿಸಿಕೊಳ್ಳುತ್ತವೆ. ಕಂಪನಿಗಳು ಹೊಸ ಹೊಸ ಅಪ್ಲಿಕೇಶನ್‌ಗಳಿಗಾಗಿ ಕೋಟಿ ಕೋಟಿ ಬಂಡವಾಳವನ್ನು ಸುರಿಯುತ್ತಿವೆ. ನಾವು ಆ ಜಾಹೀರಾತುಗಳನ್ನು ಮನಸ್ಸಿನಲ್ಲೇ ಬೈದುಕೊಂಡರೂ ಸಾಮಾಜಿಕ ಜಾಲತಾಣಗಳಿಗೆ ಭೇಟಿ ನೀಡುವುದನ್ನು ಮಾತ್ರ ಬಿಡುತ್ತಿಲ್ಲ.



ಇಂಟರ್ನೆಟ್ ಡೇಟಿಂಗ್

## ನಾಳೆ ಸಾಮಾಜಿಕ ಮಾಧ್ಯಮ ದಿನ

ಜೂನ್ 30ರಂದು ಸಾಮಾಜಿಕ ಮಾಧ್ಯಮ ದಿನವನ್ನು (ಎಸ್‌ಎಂ ಡೇ) ವಿಶ್ವದಾದ್ಯಂತ ಆಚರಿಸಲಾಗುತ್ತಿದ್ದು, ಮಾಧ್ಯಮ ಮತ್ತು ಮನರಂಜನಾ ಕಂಪನಿಗಳು ಅದ್ದೂರಿಯಾಗಿ ಈ ದಿನವನ್ನು ಆಚರಿಸುತ್ತವೆ. ಮೇಶೆಬಲ್ ಎಂಬ ಕಂಪನಿ 2010ರಲ್ಲಿ ಮೊದಲ ಬಾರಿಗೆ ಆಚರಿಸಿತು.

ಇತ್ತೀಚಿನ ವರ್ಷಗಳಲ್ಲಿ SMDay (ಎಸ್‌ಎಂಡೇ) ಎಂಬ ಹ್ಯಾಶ್‌ಟ್ಯಾಗ್ ಅನ್ನು ಬಳಸಿಕೊಳ್ಳುವ ಮೂಲಕ ಪ್ರಚಾರ ಮಾಡಲಾಗುತ್ತಿದ್ದು, ಜಾಗತಿಕ ಮಟ್ಟದಲ್ಲಿ ಭಾರಿ ಹೆಸರು ಮಾಡುತ್ತಿದೆ.

ಮಾಧ್ಯಮ ಕ್ಷೇತ್ರದಲ್ಲಿರುವ ಅವಕಾಶಗಳು, ಜವಾಬ್ದಾರಿ, ಬಳಸುವ ರೀತಿಯನ್ನು 'ಸಾಮಾಜಿಕ ಮಾಧ್ಯಮ ದಿನ' ಆಯೋಜಿಸುವ ಮೂಲಕ ಅರಿವು ಮೂಡಿಸಲಾಗುತ್ತಿದೆ. ಇದಕ್ಕಾಗಿ ಅನೇಕ ಕಂಪನಿಗಳು ಜಾಗತಿಕ ಮಟ್ಟದಲ್ಲಿ ಉಪನ್ಯಾಸ, ಕಾರ್ಯಾಗಾರಗಳನ್ನು ಹಮ್ಮಿಕೊಂಡಿವೆ.

# ವಿವಾಹದಲ್ಲಿ ಮಾಂಗಲ್ಯದ ಅಂತರಾರ್ಥ

**ತಾರೋಡಿ ಸುರೇಶ**

**ಗಂಡು–ಹೆಣ್ಣಿನ** ಮೈ ಬಲಿತು ಸಂತಾನ ಬೆಳೆಸುವ ಯೋಗ್ಯತೆ ಬೆಳೆಯುವುದಷ್ಟೇ ವಿವಾಹದ ಪಾತ್ರವಲ್ಲ. ಜೀವನದ ಬೇರಾಗಿರುವ ನಾರಾಯಣ (ಶಿವ) ಸ್ವರೂಪದಲ್ಲಿ ಮನಸ್ಸು ಸಂಲಗ್ನವಾಗಿ ತಾಮ್ರದ ತಂತಿಯಲ್ಲಿ ವಿದ್ಯುತ್ತಿನ ಪ್ರವಾಹವು ಹರಿಯುವಂತೆ ದೈವೀಭಾವವನ್ನು ಹರಿಯಿಸಬಲ್ಲ ಮೈ ಇವನದಾಗಿರಬೇಕು. ಅದಕ್ಕೆ ತಕ್ಕ ಯೋಗ್ಯತೆಯನ್ನು ಪಡೆದು ಗುರುವಿನ ಅನುಮತಿಯ ನಂತರವೇ ಅವನು ಗೃಹಸ್ಥಾಶ್ರಮಕ್ಕೆ ಹೆಜ್ಜೆಯಿರಿಸುತ್ತಾನೆ. ಅಂತೆಯೇ ವಧುವೂ ಸ್ವಗೃಹದಲ್ಲಿಯೇ ಸುಶಿಕ್ಷಿತಳಾಗಿರುತ್ತಾಳೆ. ಆದ್ದರಿಂದ ಇದು ಕೇವಲ ಹೊರಮೈಗಳ ಒಂದಾಗುವಿಕೆಯಲ್ಲ. ಒಳ ತತ್ವಗಳ - ಶಕ್ತಿಗಳ ಬೆಸುಗೆ. ಋಷಿಗಳ ಈ ನೋಟವನ್ನು ವಿವಾಹದ ಒಂದೊಂದು ಕ್ರಿಯಾಕಲಾಪಗಳಲ್ಲಿಯೂ ಗಮನಿಸಬಹುದು.

ಮಂಗಳಾಭರಣವಾದ ಮಾಂಗಲ್ಯವು (ತಾಳಿ) ಇದಕ್ಕೆ ಇನ್ನೊಂದು ಉದಾಹರಣೆಯಾಗಿದೆ. ಮಹರ್ಷಿಗಳು ಕಂಡ ಒಳಭಾವಕ್ಕೆ ಇದು ಹೊರನಕ್ಷೆಯಾಗಿದೆ. ಮಾಂಗಲ್ಯದಲ್ಲಿ ಸಾಮಾನ್ಯವಾಗಿ ಬಿಂದು, ವಿಸರ್ಗ, ಸೂರ್ಯ ಚಂದ್ರಾಗ್ನಿಗಳ ಕುರುಹು ಇದ್ದೇ ಇರುತ್ತವೆ. ಅದನ್ನು ಕಟ್ಟುವ ಸ್ಥಾನ ಕಂಠ ಮತ್ತು ಬಹುಮಟ್ಟಿಗೆ ಅದಕ್ಕೆ ಬಳಸುವ ದ್ರವ್ಯ ಸುವರ್ಣ.

ಶ್ರೀರಂಗ ಮಹಾಗುರುಗಳು ಕೊಟ್ಟ ವಿವರಣೆಯನ್ನಾಧರಿಸಿ ಕೆಳಗಿನ ವಿವರಗಳನ್ನು ಕೊಡಬಹುದು.



ವರನು ಮಾಂಗಲ್ಯವನ್ನು ವಧುವಿನ ಕಂಠಕ್ಕೆ ಕಟ್ಟುತ್ತಾನೆ. ಮಾನವನ ಬೆನ್ನುಮೂಳೆಯ ಒಳಪಾರ್ಶ್ವದಲ್ಲಿ ಮೂಲಾಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞಾ ಮತ್ತು ಸಹಸ್ರಾರ ಎಂದು ಕರೆಯಲ್ಪಡುವ ಸಪ್ತಚಕ್ರಗಳಿವೆ ಎಂದು ಜ್ಞಾನಿಗಳು ಹೇಳುತ್ತಾರೆ. ಇದನ್ನು ಆರ್ಷಸಾಹಿತ್ಯಗಳೂ ಹೇಳಿವೆ.

ಹಾಗೆಯೇ ಮೂಲಾಧಾರದಿಂದ ಕಂಠದವರೆಗಿನ ಎಡೆಯನ್ನು ಶಕ್ತಿಸ್ಥಾನವೆಂದು (ಪ್ರಕೃತಿ ಸ್ಥಾನವೆಂದು) ಕಂಠದಿಂದ ಮೇಲಿನ ಭಾಗವನ್ನು ಶಿವನ (ಪುರುಷ) ಸ್ಥಾನವೆಂದೂ ಗುರುತಿಸಿದ್ದಾರೆ. ಕಂಠಪ್ರದೇಶವು ಶಿವಶಕ್ತಿಯರ ಸಂಗಮಸ್ಥಾನವಾಗಿದೆ. ಈ ಸಂಗಮದ ಎಡೆಯಲ್ಲಿಯೇ ಮಾಂಗಲ್ಯವನ್ನು ವರನು ಕಟ್ಟುತ್ತಾನೆ. ಶಿವಭಾವವನ್ನು ಮುಟ್ಟಿರುವ ವರನು ತನ್ನ ದೈವೀಭಾವವನ್ನು ಪ್ರಕೃತಿಯಲ್ಲಿ ವಿಸ್ತರಿಸುವ, ಒಳಭಾವದ ನೆನಪಿನೊಡನೆ, ಶಿವಶಕ್ತಿಗಳ ಸಮಾಗಮದ ಸ್ಥಾನದಲ್ಲಿಯೇ ಮಾಂಗಲ್ಯವನ್ನು ಕಟ್ಟುತ್ತಾನೆ. ಎರಡು ಹುಬ್ಬುಗಳ ನೇರಕ್ಕಿಂತಲೂ ಮೇಲ್ಮುಖವಾಗಿ ಜ್ಞಾನಿಯ ಯೋಗದೃಷ್ಟಿಯು ಹರಿದಾಗ ಅಲ್ಲಿ ಬಿಂದುವಿನಂತಹ ಒಂದು ಬೆಳಕಿನ ದರ್ಶನವಾಗುತ್ತದೆ. ಅದೇ ಶಿವನ ರೂಪವಾದ ಜ್ಯೋತಿ. ಆ ಜ್ಯೋತಿ ತನ್ನ ಸಂಕಲ್ಪದಿಂದ ಪ್ರಕೃತಿರೂಪವನ್ನು ಸೃಷ್ಟಿಸಿಕೊಳ್ಳುತ್ತದೆ. ಆಗ ಒಂದು ಬಿಂದುವು ಎರಡಾದಂತಾಗುತ್ತದೆ. ಅದೇ ವಿಸರ್ಗರೂಪ. ಮೂಲ ಚೈತನ್ಯವು ಪ್ರಕೃತಿಯಲ್ಲಿ ಪ್ರವೇಶಿಸಿದಾಗ ಪ್ರಕೃತಿಗೆ ವಿಸ್ತಾರಗೊಳಿಸುವ ಯೋಗ್ಯತೆ ಉಂಟಾಗುತ್ತದೆ. ತಾತ್ಪರ್ಯವೇನೆಂದರೆ ಮೊಟ್ಟಮೊದಲ ಬಿಂದುರೂಪ, ಶಿವರೂಪವೂ ಆದ ಚೈತನ್ಯವು ವಿಸರ್ಗರೂಪವಾದ ಪ್ರಕೃತಿಯೊಡನೆ ಸೇರಿದಾಗ ಬಾಳು ವಿಸ್ತಾರಗೊಳ್ಳುತ್ತದೆ.

ಇದನ್ನೇ ಬಿಂದುವಿಸರ್ಗದ ರೂಪದಲ್ಲಿ ಮಾಂಗಲ್ಯದಲ್ಲಿ ಚಿತ್ರಿಸಿದ್ದಾರೆ. ಹಾಗೆಯೇ ಸೂರ್ಯ, ಚಂದ್ರಾಗ್ನಿಗಳೂ ಅಂತರ್ಮುಖವಾಗಿ ಸಾಗಿದಾಗ ದರ್ಶನಕ್ಕೆ ಸಿಗುವ ಶಕ್ತಿಗಳೇ. ಹೊರ ಮೈಮನಸ್ಸುಗಳು ವಯೋಮಾನಕ್ಕೆ ಅನುಗುಣವಾಗಿ ಗಂಡು-ಹೆಣ್ಣಿನ ರೂಪದಲ್ಲಿ ಸೇರುವುದು ಪ್ರಕೃತಿ ಸಹಜವಾದದ್ದು. ಆದರೆ ಇಷ್ಟೇ ಜೀವನವಲ್ಲ. ಧರ್ಮಾರ್ಥಕಾಮ ಮತ್ತು ಮೋಕ್ಷರೂಪವಾದ ಎಲ್ಲ ಪುರುಷಾರ್ಥಗಳನ್ನು ಅನುಭವಿಸಬೇಕು. ಆಗಲೇ ಬಹುಪುಣ್ಯದ ಕಾರಣದಿಂದ ಒದಗಿದ ಮಾನವದೇಹ ಸಾರ್ಥಕವಾಗುವುದು.

ಒಂದು ಕಮಲಪುಷ್ಪದ ಚಿತ್ರವನ್ನು ಬರೆದಾಗ ಅದು ಮನಸ್ಸನ್ನು ನಿಜವಾದ ಪುಷ್ಪದತ್ತ ಸೆಳೆಯುತ್ತದೆ. ಹಾಗೆಯೇ ಮಾಂಗಲ್ಯದ ವಿನ್ಯಾಸವು ನಮ್ಮನ್ನು ಒಳಜೀವನದತ್ತ ಸೆಳೆಯುತ್ತದೆ. ಸುವರ್ಣದ ಸ್ಪರ್ಶವೂ ಇದಕ್ಕೆ ಪೋಷಕ.

## ಮುನ್ನೋಟ

### ಜೂನ್ 29, ಶನಿವಾರ

**ಕಥೆ ಕೇಳೋಣ ಬನ್ನಿ**

ಕುವೆಂಪುನಗರದ ಚಿತ್ರಭಾನು ರಸ್ತೆಯ ಸುರುಚಿ ರಂಗಮನೆಯಲ್ಲಿ ಜೂನ್ 29ರಂದು ಸಂಜೆ 4.30ಕ್ಕೆ ಮಕ್ಕಳಿಗೆ 'ಕಥೆ ಕೇಳೋಣ ಬನ್ನಿ' ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರಿನ ಮಾನವ ಸಂಪನ್ಮೂಲ ಅಭಿವೃದ್ಧಿ ತರಬೇತುದಾರ ಬಿ.ಬಿ.ಶಿವಣ್ಣ ಕಥೆ ಹೇಳುವರು.

**ಸಂಗೀತ ಗಾಯನ**



ಮೈಸೂರಿನ ರಾಗ ಮ್ಯೂಸಿಕ್ ಅಕಾಡೆಮಿ ವತಿಯಿಂದ ಜೂನ್ 29ರಂದು ಸಂಜೆ 5.45ಕ್ಕೆ ಕುವೆಂಪುನಗರದ ವೀಣೆಶೇಷಣ್ಣ ಭವನದಲ್ಲಿ

ವಿದ್ವಾನ್ ಹೆಮ್ಮಿಗೆ ಪ್ರಶಾಂತ್ ಅವರಿಂದ ಸಂಗೀತ ಗಾಯನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಇವರಿಗೆ ವಿದುಷಿ ಚಾರುಲತಾ ರಾಮಾನುಜಂ (ವಯೊಲಿನ್), ವಿದ್ವಾನ್ ಬಿ.ಆರ್.ಶ್ರೀನಿವಾಸ್ (ಮೃದಂಗ) ಹಾಗೂ ವಿದ್ವಾನ್ ರಘುನಂದನ್ ರಾವ್ (ಘಟಂ) ವಾದ್ಯ ಸಹಕಾರ ನೀಡಲಿದ್ದಾರೆ.

**ಕಿರುಚಿತ್ರ ಪ್ರದರ್ಶನ**

ಹವ್ಯಾಸಿ ನಾಟಕಕಾರ ಆದರ್ಶ್ ಹೆದ್ದಾರಿ ಅವರು ನಿರ್ದೇಶಿಸಿರುವ 'ಸರ್ವೇ ಜನಾಃ ಸುಖಿನೋ ಭವಂತು' ಎಂಬ ಕಿರುಚಿತ್ರವು ಜೂನ್ 29ರಂದು ಸಂಜೆ 6.30ಕ್ಕೆ ಕಲಾಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ.

ಪ್ರಮುಖ ರಂಗ ಕಲಾವಿದರಾದ ನವೀನ್ ಶೆಟ್ಟಿ, ರೋಹಿತ್ ಗೌಡ, ಧನುಷ್ ದೊಡ್ಡನಾಯಕ ಹಾಗೂ ಕಿರುತೆರೆ ನಟಿಯರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ.

'ತಮ್ಮ ಜೀವನದಲ್ಲಿ ಎಂದಾದರೂ ದೈವ ನಂಬಿಕೆಯ ಬಗ್ಗೆ ಗೊಂದಲ ಹಾಗೂ ಪ್ರಶ್ನೆಗಳು ಮೂಡುತ್ತವೆ. ಅಂತಹ ಗೊಂದಲಗಳನ್ನು ಒಬ್ಬ ಬರಹಗಾರ ಹೇಗೆ ಪರಿಹರಿಸುತ್ತಾನೆ ಎಂಬುದೇ ನಾಟಕದ ಕಥಾಹಂದರ'.

**'ಶ್ರೀಮದ್ಭಗವದ್ಗೀತಾ'**

ನಗರದ ಯಾದವಗಿರಿಯಲ್ಲಿರು ರಾಮಕೃಷ್ಣ ಆಶ್ರಮದಲ್ಲಿ ಜೂನ್ 29ರಂದು 'ಶ್ರೀಮದ್ಭಗವದ್ಗೀತಾ' ಕುರಿತು ಉಪನ್ಯಾಸ ಆಯೋಜಿಸಲಾಗಿದೆ.

ಅಂದು ಸಂಜೆ 6ಕ್ಕೆ ಆಶ್ರಮದ ಶಾಂಭವಾನಂದಜೀ ಸಭಾಂಗಣದಲ್ಲಿ ಸ್ವಾಮಿ ಶಾಂತಿವ್ರತಾನಂದ ಅವರು ಉಪನ್ಯಾಸ ನೀಡುವರು.

### ಜೂನ್ 30, ಭಾನುವಾರ

**ಸಾಹಿತ್ಯ ಚಾವಡಿ– ಸಂವಾದ**

ಕುವೆಂಪುನಗರದ ಚಿತ್ರಭಾನು ರಸ್ತೆಯ ಸುರುಚಿ ರಂಗಮನೆಯಲ್ಲಿ ಜೂನ್ 30ರಂದು ಬೆಳಿಗ್ಗೆ 10.30ಕ್ಕೆ ಸಾಹಿತ್ಯ ಚಾವಡಿ – ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ.

ಇದರಲ್ಲಿ ಬೆಂಗಳೂರಿನ ಜಿಕೆವಿಕೆ ನಿವೃತ್ತ ಕುಲಸಚಿವ ನಾಗೇಶ್ ರಾವ್ ಅವರು ಪುತಿನ ಅವರ ಕವನಗಳ ಕುರಿತು ಮಾತನಾಡಲಿದ್ದಾರೆ.

**ಕತ್ತಲೆ ಬೆಳಕು ನಾಟಕ ಪ್ರದರ್ಶನ**



ಮೈಸೂರಿನ ರಂಗಾಯಣವು ವಾರಾಂತ್ಯದ ರಂಗಪ್ರದರ್ಶನದ ಅಂಗವಾಗಿ ಜೂನ್ 30ರಂದು ಸಂಜೆ 6.30ಕ್ಕೆ ಬಿ.ವಿ.ಕಾರಂತರ ನಿರ್ದೇಶನದ 'ಕತ್ತಲೆ ಬೆಳಕು' ನಾಟಕ ಪ್ರದರ್ಶನವನ್ನು ಹಮ್ಮಿಕೊಂಡಿದೆ. ರಂಗ ವಿನ್ಯಾಸ ಕಲಾವಿದ ಪ್ರಸನ್ನ ಅವರದ್ದು.

ಈ ನಾಟಕದಲ್ಲಿ ನಾಟಕಕಾರರು ವಿಡಂಬನೆಗೆ ಹೊರತಾಗಿಲ್ಲ. ನಾಟಕಕಾರ, ಮಾಲೀಕ ಹಾಗೂ ವ್ಯವಸ್ಥಾಪಕರ ನಡುವೆ ಚರ್ಚೆ ನಡೆಯುತ್ತಿದ್ದಂತೆ ಅದರಲ್ಲಿ ಹುಟ್ಟಿ ಬರುವ ಪಾತ್ರಗಳು ತಮ್ಮ ಸುಳ್ಳನ್ನು ಅಭಿನಯಿಸಿ ನಾಟಕಕಾರನ ಮನೆಯ (ಮನದ) ಕತ್ತಲೆ ಕೋಣೆಯನ್ನು ಸೇರಿಬಿಡುತ್ತವೆ ಎನ್ನುವುದು ನಾಟಕ ಸನ್ನಿವೇಶ.

**'ಕಲಿಯುಗದ ವ್ಯಾಸ ಶ್ರೀಮಹೇಂದ್ರನಾಥಗುಪ್ತ'**

ನಗರದ ಯಾದವಗಿರಿಯಲ್ಲಿರುವ ರಾಮಕೃಷ್ಣ ಆಶ್ರಮದಲ್ಲಿ ಜೂನ್ 30ರಂದು 'ಶ್ರೀಮದ್ಭಗವದ್ಗೀತಾ' ಕುರಿತು ಉಪನ್ಯಾಸ ಆಯೋಜಿಸಲಾಗಿದೆ.

ಅಂದು ಸಂಜೆ 6ಕ್ಕೆ ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣದಲ್ಲಿ, ಸ್ವಾಮಿ ಶಾಂತಿ ವ್ರತಾನಂದ ಅವರು ಉಪನ್ಯಾಸ ನೀಡುವರು.





# 'ಬಂಗಾರದ ಮನುಷ್ಯರು', 'ಕೃಷಿ ಸಂಸ್ಕೃತಿ ಕಥನ' ಪುಸ್ತಕಗಳ ಬಿಡುಗಡೆ

**ಪ್ರಯೋಗಶೀಲ** ಕೃಷಿ ವಿಧಾನಗಳಿಂದ ನೆಮ್ಮದಿ ಕಂಡುಕೊಂಡಿರುವ ಅನ್ನದಾತರ ಒಂದಿಷ್ಟು ವಿನೂತನ ಮಾದರಿಗಳನ್ನು ರೈತರಿಗೆ ಪರಿಚಯಿಸಿಕೊಡುವ ಹವ್ಯಾಸಿ ಪತ್ರಕರ್ತ, ಕೃಷಿಕ ಚಿನ್ನಸ್ವಾಮಿ ವಡ್ಡಗೆರೆ ಬರೆದಿರುವ 'ಬಂಗಾರದ ಮನುಷ್ಯರು' ಬೆಳಕಿನ ಬೇಸಾಯದ ಕಥಾನಕ ಹಾಗೂ ದೇಸಿಕೃಷಿ ಪರಂಪರೆ ಪರಿಚಯಿಸುವ 'ಕೃಷಿ ಸಂಸ್ಕೃತಿ ಕಥನ' ಎಂಬ ಎರಡು ಕೃತಿಗಳ ಬಿಡುಗಡೆ ಜೂನ್ 30ರಂದು ಭಾನುವಾರ ನಡೆಯಲಿದೆ.

ಕಲಾಮಂದಿರ ಆವರಣದಲ್ಲಿರುವ ಕಿರು ರಂಗಮಂದಿರದಲ್ಲಿ ಅಂದು ಬೆಳಿಗ್ಗೆ 10.30ಕ್ಕೆ ಪುರುಷೋತ್ತಮ್ ಮತ್ತು ತಂಡದಿಂದ ಗೀತಗಾಯನ ನಂತರ 11.30ಕ್ಕೆ ಕೃಷಿ ಸಾಧಕರಿಂದ ಕೃತಿಗಳ ಬಿಡುಗಡೆ, ಪ್ರಸಕ್ತ ಕೃಷಿ ಬಿಕ್ಕಟ್ಟುಗಳನ್ನು ಕುರಿತ ಉಪನ್ಯಾಸ ನಡೆಯಲಿದೆ.

'ಬೆಳಕಿನ ಬೇಸಾಯ' ಕುರಿತು ವಿಜ್ಞಾನ ಲೇಖಕ ನಾಗೇಶ್ ಹೆಗಡೆ, 'ಕೃಷಿ ಸಂಸ್ಕೃತಿ ಕಥನ' ಕುರಿತು ಜಲತಜ್ಞ ಮಲ್ಲಿಕಾರ್ಜುನ ಹೊಸಪಾಳ್ಯ ಮಾತನಾಡಲಿದ್ದಾರೆ. ಪತ್ರಕರ್ತೆ ರಶ್ಮಿ ಕೌಜಲಗಿ, ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್, ಚಾಮರಾಜನಗರ ಜಿಲ್ಲಾ ರೈತಸಂಘದ ಅಧ್ಯಕ್ಷ ಹೊನ್ನೂರು ಪ್ರಕಾಶ್, ಅಭಿರುಚಿ ಗಣೇಶ್, ನಿಂಗರಾಜು ಚಿತ್ತಣ್ಣನವರ ಹಾಗೂ ಸಾಧಕ ಅನ್ನದಾತರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಅಭಿರುಚಿ, ಚಿಂತನ ಚಿತ್ತಾರ ಪ್ರಕಾಶನ ಮತ್ತು ಪರಿವರ್ತನ ರಂಗಸಮಾಜದ ಗೆಳೆಯರ ಸಹಕಾರದಲ್ಲಿ ನಡೆಯುವ ಈ ಕಾರ್ಯಕ್ರಮಕ್ಕೆ ನೈಸರ್ಗಿಕ ಕೃಷಿ ಸಾಧಕರೆ ಚಾಲನೆ ನೀಡಲಿದ್ದಾರೆ.

ಬಹುತೇಕ ರೈತರು ಕೃಷಿ ದೆಸೆಯಿಂದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಬೇಸಾಯದಿಂದ ಬೇಸರವಾಗಿ ಕೃಷಿಯಿಂದ ವಿಮುಖರಾಗುತ್ತಿರುವುದು ಈಗ ಸಾಮಾನ್ಯ ಸಂಗತಿಯಾಗಿದೆ. ನಮ್ಮ ನಡುವೆ ಇರುವ ಪ್ರಯೋಗಶೀಲ ಯಶಸ್ವಿ ರೈತರನ್ನು ಕಂಡು ಮಾತನಾಡಿಸಿದಾಗ ಸೋತಿರುವುದು ಕೃಷಿಯಲ್ಲ, ನಾವು ಎನ್ನುವುದು ಅರ್ಥವಾಗುತ್ತದೆ. ಅಂತಹ ಯಶಸ್ವಿ ಅನ್ನದಾತರನ್ನು ಕಂಡು ಅವರ ಅನುಭವಗಳನ್ನು 'ಬಂಗಾರದ ಮನುಷ್ಯರು ಬೆಳಕಿನ ಬೇಸಾಯದ ಕಥಾನಕ' ಎಂಬ ಕೃತಿಯಲ್ಲಿ ಚಿನ್ನಸ್ವಾಮಿ ವಡ್ಡಗೆರೆ ಕಟ್ಟಿಕೊಟ್ಟಿದ್ದಾರೆ.





**ಕೃಷಿ ಸಂಸ್ಕೃತಿ ಕಥನ:** ದೇಸಿಕೃಷಿ ಪರಂಪರೆಯನ್ನು ಪರಿಚಯಿಸಿಕೊಡುವ ಈ ಕೃತಿಯಲ್ಲಿ ಕೃಷಿ ಕಥನ, ಸಾಹಿತ್ಯ ಕಥನ ಮತ್ತು ಪ್ರವಾಸ ಕಥನ ಎಂಬ ಮೂರು ಭಾಗಗಳಿವೆ.

# ಯುವತಿಯರೇ ಧೂಮಪಾನಿ ಹುಡುಗನಿಂದ ದೂರವಿರಿ



**ವಸಂತಕುಮಾರ್ ಮೈಸೂರುಮಠ**

**ನೀವು** ಮದುವೆ ಆಗುವ ಹುಡುಗ ಸಿಗರೇಟ್, ಬೀಡಿ, ಕುಡಿತ, ಮಾದಕ ವಸ್ತುಗಳ ವ್ಯಸನಿಯೇ? ಹೌದು ಎನ್ನುವುದಾದರೆ ಯೋಚಿಸಿ... ಏಕೆಂದರೆ, ತಂಬಾಕಿನ ಧೂಮದಲ್ಲಿ ಇರುವ ರಾಸಾಯನಿಕ ವಸ್ತುಗಳು ದೇಹದ ಆರೋಗ್ಯಕರ ಜೀವಾಣುಗಳಿಗೆ ಅಂಟಿಕೊಂಡು ಅವನ್ನು ಕೆಡಿಸಿ ವಿಕಾರಗೊಳಿಸುತ್ತವೆ. ಇದರಿಂದ ಹುಟ್ಟುವ ಮಕ್ಕಳು ಆರೋಗ್ಯಕರವಾಗಿ ಇರುತ್ತವೆ ಎಂಬುದನ್ನು ಹೇಳಲು ಸಾಧ್ಯವಿಲ್ಲ.

ಒಂದು ವೇಳೆ, ಧೂಮಪಾನ ಮಾಡುವ ವ್ಯಕ್ತಿಯನ್ನು ಮದುವೆಯಾದರೆ ಆದಷ್ಟು ಬೇಗ ಸಿಗರೇಟು, ಬೀಡಿ, ಗುಟ್ಕಾ, ಜರ್ದಾ, ಖೈನಿಯಿಂದ ಬಿಡಿಸಿ. ಇಲ್ಲವಾದರೆ ಕಾಯಿಲೆ ಜೊತೆಗೆ, ನಿಮ್ಮನ್ನು ಲೈಂಗಿಕವಾಗಿ ತೃಪ್ತಿಗೊಳಿಸುವ ಅವರ ಲೈಂಗಿಕ ಶಕ್ತಿಯೇ ಕುಂಠಿತಗೊಳ್ಳುತ್ತದೆ. ಸಂಸಾರದಲ್ಲಿ ಬರೀ ಹೊಗೆಯಾಡುತ್ತದೆ. ಇದಕ್ಕೆ ಅವಕಾಶ ಮಾಡಿಕೊಡಬಾರದು. ಇದು ಬರೀ ಮಾತಲ್ಲ, ವೈದ್ಯಕೀಯ ಸಂಶೋಧನೆಗಳೇ ಹೇಳುವ ಕಟು ವಾಸ್ತವ.

ಮಹಿಳೆಯರು ಮಾದಕ ವಸ್ತುಗಳ ವ್ಯಸನಿಗಳಾಗಿದ್ದರೆ, ಅವು ಮುಂದಿನ ದಿನಗಳಲ್ಲಿ ಸಾಕಷ್ಟು ಅನಾರೋಗ್ಯಕ್ಕೆ ದೂಡುತ್ತವೆ. ನಿಮ್ಮ ದೇಹದಲ್ಲಿರುವ ಆರೋಗ್ಯಕರ ಜೀವಕಣಗಳನ್ನು ತಂಬಾಕಿನಲ್ಲಿರುವ ರಾಸಾಯನಿಕ ವಸ್ತುಗಳು ವಿಕಾರಗೊಳಿಸುತ್ತವೆ. ಗರ್ಭಧಾರಣಾ ಶಕ್ತಿಯನ್ನು ಕುಂಠಿತಗೊಳಿಸಿ, ಗರ್ಭಪಾತ ಮತ್ತಿತರ ಆರೋಗ್ಯ ಸಮಸ್ಯೆಗಳಿಗೆ ದೂಡುತ್ತವೆ. ಧೂಮಪಾನದ ಚಟವನ್ನು ಬಿಟ್ಟು ಆರೋಗ್ಯಕರ ಮಕ್ಕಳಿಗೆ ಜೀವ ಕೊಡಿ ಮತ್ತು ಒಳ್ಳೆಯ ಜೀವನ ನಡೆಸಿರಿ.

**ಅರ್ಥ ವ್ಯವಸ್ಥೆಗೆ ಧಕ್ಕೆ:** ನಿಮ್ಮ ಸಂಸಾರದ ಅರ್ಥ ವ್ಯವಸ್ಥೆಯನ್ನು ತಂಬಾಕು ಚಟ ಅಲ್ಲೋಲ-ಕಲ್ಲೋಲ ಮಾಡುತ್ತದೆ. ವರದಿಗಳ ಪ್ರಕಾರ, 20ನೇ ವಯಸ್ಸಿನಲ್ಲಿ ಈ ಚಟವನ್ನು ಬೆಳೆಸಿಕೊಂಡಿದ್ದರೆ, ಆ ವ್ಯಕ್ತಿಯು ಅದನ್ನು ಸುಮಾರು 40 ವರ್ಷಗಳವರೆಗೆ ಮುಂದುವರೆಸುತ್ತಾನೆ. ನಂತರ ತಾನಾಗಿಯೇ ತಂದುಕೊಂಡ ರೋಗಗಳಿಗೆ ಬಲಿಯಾಗುತ್ತಾನೆ ಅಥವಾ ನರಳುತ್ತಾನೆ. ಅಂತಹ ಸಂದರ್ಭದಲ್ಲಿ ಅವರು ಧೂಮಪಾನದ ಚಟ ಬಿಡುವ ಮನಸ್ಸು ಮಾಡಬಹುದು ಅಥವಾ ನರಳಿಕೊಂಡೇ ಧೂಮಪಾನವನ್ನು ಮುಂದುವರಿಸಿ ದೊಡ್ಡ ರೋಗಗಳಿಗೆ ಬಲಿಯಾಗಬಹುದು.

ಖರ್ಚು ವೆಚ್ಚಗಳನ್ನು ಗಮನಿಸುವುದಾದರೆ ಪ್ರತಿದಿನ ಒಂದು ಪಾಕೆಟ್ ಸಿಗರೇಟು ಸೇದುವ ವ್ಯಕ್ತಿ ಸುಮಾರು ₹150 ಖರ್ಚು ಮಾಡುತ್ತಾನೆ. ಅಂದರೆ, ವರ್ಷದಲ್ಲಿ ಸುಮಾರು ₹54,750. 40 ವರ್ಷಗಳಲ್ಲಿ ಆ ವ್ಯಕ್ತಿಯು ಸುಮಾರು ₹21.90 ಲಕ್ಷ ಹಣವನ್ನು ಸಿಗರೇಟ್ ರೂಪದಲ್ಲಿ ಸುಟ್ಟಿರುತ್ತಾನೆ. 2 ಪಾಕೆಟ್ ಸೇದುವ ವ್ಯಕ್ತಿಯಾಗಿದ್ದರೆ ಈ ಅವಧಿಯಲ್ಲಿ ₹42.80 ಲಕ್ಷ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಧೂಮಪಾನದಿಂದ ಉಂಟಾಗುವ ರೋಗಗಳನ್ನು ವಾಸಿ ಮಾಡಲು ಲಕ್ಷಗಟ್ಟಲೆ ಹಣ ತೆರಬೇಕಾಗುತ್ತದೆ.

**ಹೊಗೆಸೊಪ್ಪು ಪರಿಸರಕ್ಕೆ ಮಾರಕ:** ಒಂದು ಕೆ.ಜಿ ಹೊಗೆಸೊಪ್ಪನ್ನು ಹದ ಮಾಡಲು 8 ಕೆ.ಜಿ ಉರುವಲು ಬೇಕು. ತಂಬಾಕು ಮಂಡಳಿಯು ಪ್ರಸ್ತಕ ವರ್ಷದಲ್ಲಿ 10 ಕೋಟಿ ಕೆ.ಜಿ ಹೆಚ್ಚುವರಿ ಹೊಗೆಸೊಪ್ಪು ಬೆಳೆಯಲು (ಹಿಂದಿನ ವರ್ಷ 9.5 ಕೋಟಿ ಕೆ.ಜಿ) ನಿಗದಿ ಪಡಿಸಿದೆ. ಇದಕ್ಕಾಗಿ 80 ಕೋಟಿ ಕೆ.ಜಿ. ಯಷ್ಟು ಉರುವಲು ಬೇಕು. ಇದಕ್ಕಾಗಿ ಲಕ್ಷಾಂತರ ಮರಗಳ ಮಾರಣಹೋಮ ನಡೆಸಬೇಕು! ಮಾನವ ಸಂಕುಲಕ್ಕೆ ಮಾರಕವಾಗಿರುವ ಹೊಗೆಸೊಪ್ಪು ಬೆಳೆಯುವುದನ್ನು ರೈತರು ಕೈಬಿಡಬೇಕು. ಪರ್ಯಾಯ ಬೆಳೆಗಳ ಕಡೆಗೆ ಗಮನ ಹರಿಸಬೇಕು.

## ಚಿಣ್ಣರ ಚಿತ್ರ





ಸಿದ್ಧಾರ್ಥನಗರದಲ್ಲಿರುವ ಜೆಎಸ್‌ಎಸ್ ಪಬ್ಲಿಕ್ ಶಾಲೆಯ 4ನೇ ತರಗತಿಯ ವಿದ್ಯಾರ್ಥಿ ಎಚ್.ಎಸ್.ಇಶಾಂತ್ ಬಿಡಿಸಿದ ನಿಸರ್ಗ ಚಿತ್ರ